**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 567 (482) |
| ಸದಸ್ಯರ ಹೆಸರು | ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 20.08.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಲಬುರಗಿ ಮಹಾನಗರದ ಹೊರವಲಯದಲ್ಲಿ ನಿರ್ಮಿಸಲು ಉದ್ದೇಶಿಸಿದ ಎರಡನೇ ರಿಂಗ್ ರಸ್ತೆ ಯೋಜನೆಯು ಇದುವರೆವಿಗೂ ಕಾರ್ಯರೂಪಕ್ಕೆ ಬರದಿರಲು ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ:ನಅಇ 59 ಗುಅಪ್ರಾ 2008 ದಿನಾಂಕ: 01.12.2010 ರ ಆದೇಶದ ಪರಿಷ್ಕೃತ-2 ರ ಮಹಾಯೋಜನೆಯ ನಕ್ಷೆಯಲ್ಲಿ ಕಲಬುರಗಿ ನಗರಕ್ಕೆ 60 ಮೀಟರ್ ಅಗಲದ ಹೊರ ವರ್ತುಲ ರಸ್ತೆಯನ್ನು ಪ್ರಸ್ತಾಪಿಸಿ ಅನುಮೋದನೆ ನೀಡಲಾಗಿದೆ.<br><br>ಸದರಿ ರಸ್ತೆಯ ಭಾಗದಲ್ಲಿ ವಿನ್ಯಾಸ ಅನುಮೋದನೆಗಾಗಿ ಬರುವ ಜಮೀನುಗಳಲ್ಲಿ ಸದರಿ ರಸ್ತೆ ಅಳವಡಿಸಿ ವಿನ್ಯಾಸ ಅನುಮೋದನೆ ನೀಡಲಾಗುತ್ತಿದೆ. ಇಲ್ಲಿಯವರೆಗೆ ಕೆ.ಹೆಚ್.ಬಿ ಹಾಗೂ ಇತರ ಅನುಮೋದಿತ ವಿನ್ಯಾಸಗಳಲ್ಲಿ ಸುಮಾರು 900 ಮೀಟರ್‌ಗಳಷ್ಟು ರಸ್ತೆಗಾಗಿ ಭೂಮಿಯನ್ನು ಕಾಯ್ದಿರಿಸಲಾಗಿದೆ.<br><br>ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಔಟರ್ ರಿಂಗ್ ರೋಡ್ ನ ವಿಸ್ತೃತ ಯೋಜನಾ ವರದಿ ತಯಾರಿಸಿರುವುದಿಲ್ಲ. ಆದರೆ ಕಲಬುರಗಿ ನಗರದ ಹೊರ ವರ್ತುಲ ರಸ್ತೆ (ಪೆರಿಫೆರಲ್ ರಿಂಗ್ ರಸ್ತೆ) (PRR) ಅನುಷ್ಠಾನಕ್ಕಾಗಿ ನಗರ ಯೋಜನಾ ಯೋಜನೆಗಾಗಿ (Town Planning Scheme)ಅಧ್ಯಯನಗಳು ಹಾಗೂ ವಿವರವಾದ ಯೋಜನಾ ವರದಿ (DPR) ಗಳನ್ನು ಸಿದ್ಧಪಡಿಸಲು ಸಲಹಾ ಸೇವೆಗಳನ್ನು (Consultancy Services) ಟೆಂಡರ್ ಕರೆಯುವ ಹಂತ ಪ್ರಕ್ರಿಯೆ ಜಾರಿಯಲ್ಲಿದೆ. |
| (ಆ) | ಔಟರ್ ರಿಂಗ್ ರೋಡ್‌ನ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗಿದೆಯೆ; ಸಿದ್ಧಪಡಿಸಿದ್ದಲ್ಲಿ, ಸದರಿ ವರದಿಯನ್ನು ಯಾವ ಇಲಾಖೆಗೆ ಯಾವಾಗ ಸಲ್ಲಿಸಲಾಗಿದೆ; ಹಾಗೂ ಸದರಿ ಯೋಜನೆಗೆ ಬೇಕಾಗಿರುವ ಅಂದಾಜು ಅನುದಾನ ಎಷ್ಟು; | |
| (ಇ) | ಸದರಿ ಯೋಜನಾ ವರದಿಗೆ ಸರ್ಕಾರದಿಂದ ತೆಗೆದುಕೊಂಡ ಕ್ರಮಗಳೇನು ಹಾಗೂ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ? | ಕಲಬುರಗಿ ನಗರದ ಹೊರ ವರ್ತುಲ ರಸ್ತೆ (ಪೆರಿಫೆರಲ್ ರಿಂಗ್ ರಸ್ತೆ) (PRR) ಅನುಷ್ಠಾನಕ್ಕಾಗಿ ಕಾರ್ಯಸಾಧ್ಯತಾ ವರದಿ ತಯಾರಿಸುವ ಕುರಿತು ದಿನಾಂಕ:18.07.2026 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. |

ಕಡತ ಸಂಖ್ಯೆ: ನಅಇ 220 ಗುಅಪ್ರಾ 2026

**(ಡಾ.ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು